ದಿನಾಂಕಃ **07.02.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ ಶ್ರೀ ಬಿ ಆರ್ ವಕೀಲರಿಂದಃ-</u>

ನಿಪಿ-1 ರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಿರುತ್ತಾರೆ ಎಂದು ಚಾಸಾ-9 ರವರು ಹಾಜರುಪಡಿಸಿದ್ದು ಸದರಿ ಹೇಳಿಕೆ ಮೇರೆಗೆ ಪ್ರಕರಣ ದಾಖಲಿಸುವ ಸಮಯದಲ್ಲಿ ಸದರಿ ಹೇಳಿಕೆಯಲ್ಲಿ ವೈದ್ಯರ ಸಹಿ ಇತ್ತೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ವೈದ್ಯರ ಸಹಿ ಇರಲಿಲ್ಲ. ಚಾಸಾ-9 ರವರ ಹೇಳಿಕೆ ಮೇರೆಗೆ ನಿಪಿ-1 ರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಿರುತ್ತಾರೆ ಎಂದು ನಿರ್ಧಾರಕ್ಕೆ ಬಂದು ಪ್ರವ ವರದಿ ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಿಪಿ-1 ನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದರೆ ವೈದ್ಯರು ಧೃಡೀಕರಿಸುತ್ತಿದ್ದರು ಎಂದರೆ ಸರಿಯಲ್ಲ. ಗಾಯಾಳು ಯಾವುದೇ ಹೇಳಿಕೆ ನೀಡದೇ ಇದ್ದರೂ ಸಹ ಪರಿಹಾರ ದೊರಕಿಸಿಕೊಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ರವರು ಕುನ್ನಾಳು ಗ್ರಾಮದವರು. ಸಖರಾಯಪಟ್ಟಣದಿಂದ ಕುನ್ನಾಳು ಗ್ರಾಮಕ್ಕೆ 4-5 ಕಿಮಿ ಆಗುತ್ತದೆ. ಘಟನಾ ಸ್ಥಳದಿಂದ ಕುನ್ನಾಳು ಗ್ರಾಮಕ್ಕೆ 6 ಕಿಮಿ ಅಂತರ ಇರುತ್ತದೆ. ಚಾಸಾ-3 ರವರು ಘಟನಾ ಸ್ಥಳದಲ್ಲಿದ್ದರು. ಚಾಸಾ-3 ರವರನ್ನು ಯಾರು ಕರೆಸಿರುತ್ತಾರೆ ಎಂದರೆ ಸಾಕ್ಷಿ ನಾವೇ ನೋಟಿಸು ಜಾರಿ ಮಾಡಿ ಕರೆಸಿರುತ್ತೇವೆ ಎಂದು ನುಡಿಯುತ್ತಾರೆ. ನಿರ್ದಿಷ್ಟ ಸಮಯಕ್ಕೆ ಘಟನಾ ಸ್ಥಳದಲ್ಲಿ ಇರಿ ಎಂದು ನೋಟಿಸು ನೀಡಿರುತ್ತೇನೆ. ಮಹಜರ್ ಸಮಯದಲ್ಲಿ ಘಟನಾ ಸ್ಥಳದಲ್ಲಿ ನೋಟಿಸು ಜಾರಿ ಮಾಡಿರುತ್ತೇನೆ. ಚಾಸಾ-5 ಮತ್ತು 6 ರವರಿಗೆ ಸ್ಥಳದಲ್ಲಿ ಬೆಳಗ್ಗೆ 9.30 ರಿಂದ 10.00 ಗಂಟೆಗೆ ನೋಟಿಸು ಜಾರಿ ಮಾಡಿರುತ್ತೇನೆ. ನಾವು ಹೋಗುವ ಪೂರ್ವದಲ್ಲಿ ಅವರು

ಸ್ಥಳದಲ್ಲಿದ್ದರು ಎಂದರೆ ಸರಿ. ಚಾಸಾ-3 ತನ್ನ ವಿಚಾರಣೆಯಲ್ಲಿ ತಾನು ಠಾಣೆಗೆ ಹೋಗಿದ್ದಾಗ ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳಕ್ಕೆ ನಾನು 9.00 ಗಂಟೆಗೆ ಹೋಗಿರುತ್ತೇನೆ. ಘಟನಾ ಸ್ಥಳದಲ್ಲಿ 10.45 ರಿಂದ 11.45 ರವರೆಗೆ ಇದ್ದೆವು. ನಾವುಗಳು ಮುಂಚೆ ಸ್ಥಳಕ್ಕೆ ಹೋಗಿದ್ದು ನಂತರ ಚಾಸಾ-3, 5, 6 ರವರು ಬಂದಿರುತ್ತಾರೆ. ಅವರುಗಳು 10.00 ಗಂಟೆಗೆ ಬಂದಿರುತ್ತಾರೆ. ನಿಮಗೆ ಘಟನಾ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-3 ರವರು ತೋರಿಸಿರುತ್ತಾರೆ. ಚಾಸಾ-3 ತನ್ನ ಮುಖ್ಯ ವಿಚಾರಣೆಯಲ್ಲಿ ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ಮಹಜರನ್ನು ಮಹಮ್ಮದ್ ರವರು ಬರೆದಿರುತ್ತಾರೆ. ಅವರು ನಿಪಿ-3 ರ ಛಾಯಾಚಿತ್ರದಲ್ಲಿ ಇರುವುದಿಲ್ಲ. ಚಾಸಾ-3, 5, 6 ರವರು ಬೈಕಿನಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ನಿಪಿ-3 ರ ಛಾಯಾಚಿತ್ರದಲ್ಲಿ ಬೈಕ್ ಕಂಡುಬರುವುದಿಲ್ಲ. ಚಾಸಾ-6 ರವರ ತಂದೆ ಹೆಸರು ಬೀರೇಗೌಡ ವಾಸಃ ಬಾಣೂರು ಎಂದು ಹೇಳಿರುತ್ತಾರೆ. ಚಾಸಾ-6 ರವರು ತನ್ನ ತಂದೆ ಹೆಸರು ಲಿಂಗೇಗೌಡ ಎಂದು ನ್ಯಾಯಾಲಯದಲ್ಲಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-6 ರವರ ತಂದೆ ಹೆಸರು ಬಿ ವಿ ಲಿಂಗೇಗೌಡ ಎಂದು ಅವರ ಆಧಾರ್ ಕಾರ್ಡ ನಲ್ಲಿ ನಮೂದೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದೋಷಾರೋಪಣಾ ಪತ್ರ ಮತ್ತು ಮಹಜರ್ ಗಳಲ್ಲಿ ಚಾಸಾ-6 ರವರ ತಂದೆ ಹೆಸರು ಕಣ್ತಪ್ಪಿನಿಂದ ಬೀರೇಗೌಡ ಎಂದು ನಮೂದಾಗಿರುತ್ತದೆ. ಘಟನಾ ಸ್ಥಳದಲ್ಲಿ ಮೋಹನ್ ಕುಮಾರ್ ಬಿನ್ ಲಿಂಗೇಗೌಡ ಇದ್ದರೋ ಅಥವಾ ಮೋಹನ್ ಕುಮಾರ್ ಬಿನ್ ಬೀರೆಗೌಡ ಇದ್ದರೋ ಎಂದರೆ ಸಾಕ್ಷಿ ಮೋಹನ್ ಕುಮಾರ್ ಬಿನ್ ಬೀರೆಗೌಡ ಇದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿರುವ ಮೋಹನ್ ಕುಮಾರ್ ಬಿನ್ ಲಿಂಗೇಗೌಡ ಇರಲಿಲ್ಲ ಎಂದರೆ ಸರಿ. ಚಾಸಾ-5 ಮತ್ತು 6 ರವರು ಚಾಸಾ-1 ರವರ ಸಂಬಂಧಿಕರು ಎಂದರೆ ಸಾಕ್ಷಿ ಒಂದೇ ಊರಿನವರು ಎಂದು ನುಡಿಯುತ್ತಾರೆ.

ಅಮಾನತ್ ಮಹಜರನ್ನು ಪೋಲಿಸ್ ಠಾಣೆಯಲ್ಲಿ ಜರುಗಿಸಿರುತ್ತೇನೆ. ವಾಹನವನ್ನು ಠಾಣೆಗೆ ದಿಃ 15.04.2022 ರಂದು ಮಧ್ಯಾಹ್ನ ಸಮಯಕ್ಕೆ ತಂದಿರುತ್ತಾರೆ. ಅಮಾನತ್ ಮಹಜರನ್ನು ದಿಃ 15.04.2022 ರಂದು ಮಧ್ಯಾಹ್ನ 1.30 ರಿಂದ 2.00 ಗಂಟೆ ಸಮಯದಲ್ಲಿ ಅಮಾನತ್ ಮಹಜರನ್ನು ಜರುಗಿಸಿರುತ್ತೇನೆ. ವಾಹನವನ್ನು ತಂದು ಹಾಜರುಪಡಿಸಲು ನೋಟಿಸು ಜಾರಿ ಮಾಡಿರುತ್ತೇನೆ. ಅಮಾನತ್ ಮಹಜರ್ ನಲ್ಲಿ ವಾಹನಗಳನ್ನು ನೋಟಿಸು ಕೊಟ್ಟು ಠಾಣೆಗೆ ಹಾಜರುಪಡಿಸಿರುವ ವಿಚಾರವನ್ನು ಬರೆದಿರುತ್ತೇನೆ. ನಿಪಿ-4 ರಲ್ಲಿ ವಾಹನಗಳನ್ನು ಠಾಣೆಗೆ ಮುಂಚೆಯೇ ತಂದು ಹಾಜರುಪಡಿಸಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಅಮಾನತ್ ಸಮಯಕ್ಕೆ ವಾಹನಗಳನ್ನು ತಂದಿರುತ್ತಾರೆ ಎಂದು ನುಡಿಯುತ್ತಾರೆ. ವಾಹನದ ಮಾಲೀಕರು ವಾಹನವನ್ನು ನಮ್ಮ ಸುಪರ್ದಿಗೆ ಒಪ್ಪಿಸುವ ಸಮಯಕ್ಕೆ ಛಾಯಾಚಿತ್ರಗಳನ್ನು

ತೆಗೆಸಿರುತ್ತೇನೆ. ಚಾಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಚಪ್ಪಲಿಗಳು ಬಿದ್ದಿರುವ ಬಗ್ಗೆ ನುಡಿದಿರುತ್ತಾರೆ, ಸದರಿ ಅಂಶವನ್ನು ಮಹಜರ್ ನಲ್ಲಿ ತೋರಿಸಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಸದರಿ ಮಹಜರ್ ನಲ್ಲಿ ಚಪ್ಪಲಿಗಳು ಬಿದ್ದಿರುವ ಅಂಶ ನಮೂದು ಇಲ್ಲಾ ಎಂದು ನುಡಿಯುತ್ತಾರೆ. ಚಾಸಾ-5 ರವರು ನಿಪಿ-2 ಮತ್ತು 4 ರ ಮಹಜರನ್ನು ಸ್ಥಳದಲ್ಲಿ ಬರೆದಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಪಘಾತವಾಗಿದೆ ಎಂದು ಹೇಳಲಾದ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳ ಮಹಜರ್ ಮತ್ತು ಅಮಾನತ್ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗದೇ ಇದ್ದರೂ ಸಹ ಗಾಯಾಳುವಿಗೆ ಪರಿಹಾರ ದೊರಕಿಸುವ ಸಲುವಾಗಿ ಸುಳ್ಳು ಪುವವ ವರದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರ ಚಕ್ಕುಬಂಧಿಯ ವಿವರಗಳನ್ನು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಚಾಸಾ-4 ರವರು ಹೇಳಿರುತ್ತಾರೆ. ಚಾಸಾ-4 ರವರು ಚಕ್ಕುಬಂಧಿಯ ವಿವರಗಳನ್ನು ತಿಳಿಸಿರುತ್ತಾರೆ ಎಂದು ಮಹಜರ್ ನಲ್ಲಿ ಬರೆದಿರುವುದಿಲ್ಲ, ಚಾಸಾ-4 ರವರ ಸಹಿ ಪಡೆದಿರುವುದಿಲ್ಲ. ಚಾಸಾ-4 ರವರ ಊರು ಕೇತುಮಾರನಹಳ್ಳಿ. ಚಕ್ಕುಬಂಧಿಯಲ್ಲಿರುವ ಜಮೀನುಗಳ ಪಹಣಿ ಪತ್ರಿಕೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ಚಾಸಾ-4 ಮಹಜರ್ ಸಮಯಕ್ಕೆ ಹಾಜರಿದ್ದು ಚಕ್ಕುಬಂಧಿ ವಿವರ ತಿಳಿಸಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲಾ ಎಂದರೆ ಸರಿ.

ಅಪಘಾತವಾಗದೇ ಇರುವ ಕಾರಣ ಸ್ಥಳ ಪಂಚನಾಮೆಗೂ ನಿಪಿ-1 ರಲ್ಲಿ ವಿವರಿಸಿರುವ ಸ್ಥಳಕ್ಕೂ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಸಮಯದಲ್ಲಿ ವಾಹನಗಳು ಸ್ಥಳದಲ್ಲಿ ಇರಲಿಲ್ಲ. ಅಪಘಾತದ ವಾಹನಗಳನ್ನು ವಾಹನದ ಚಾಲಕರು ತೆಗೆದುಕೊಂಡು ಹೋಗಿರುತ್ತಾರೆ. ಬೈಕಿನ ಚಾಲಕನು ಬೈಕನ್ನು ತೆಗೆದುಕೊಂಡು ಬರುವ ಸಮಯದಲ್ಲಿ ಆತನೇ ಅಪಘಾತ ಪಡಿಸಿ ಹಾನಿ ಮಾಡಿರುವ ಸಂಭವ ಇದೆ ಎಂದರೆ ಸರಿಯಲ್ಲ. ಯಾವುದೇ ಅಪಘಾತವಾಗದಿದ್ದರೂ ಸಹ ಚಾಸಾ-1 ರವರು ನೀಡಿರುವ ಸುಳ್ಳು ದೂರಿಗೆ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.